


**ಎಡದಿಂದ ಬಲಕ್ಕೆ:**

1. ಸನ್ಮಿತ್ರನಿಂದ ಕಲಿತ ವಿದ್ಯೆ ಪ್ರಾಚೀನ ಕಾಲದಿಂದಲೂ ಇರುವಂಥದು 4
3. ಆತನ ಬಾಹುಬಲ ತುಂಬ ಹೆಚ್ಚಿನದಾಗಿದೆ 3
4. ಎಲ್ಲವನ್ನೂ ಕಬಳಿಸಿದ ಕುರಿಯ ಕೂದಲಿನ ಹೊದಿಕೆ ತಿರುಗಾಮುರುಗಾ 3
6. ಎಲ್ಲೆಲ್ಲೂ ಹೊಗಳಿಕೆ ಪಡೆದಿದ್ದೇ ಆಕೆಯ ಭಾರೀ ಸಂಪಾದನೆ 4
7. ಅವನಿಂದ ರಚಿಸಲ್ಪಟ್ಟ ಕೃತಿಯ ಅನ್ಯ ಭಾಷಾ ತರ್ಜುಮೆ 4
8. ಹನಿ ಹನಿಯನ್ನೂ ಎಳೆದು ಕೈ ಸೇರಿಸುವುದು ಅಪಾಯ ತರುವಂತಾದೀತು! 4
10. ಆತ ಗಣ್ಯನಾಗಲು ಕಾರಣ ಅಷ್ಟೆಲ್ಲ ಒಡವೆ ದುಡ್ಡು 4
12. ಪೂರ್ವಕಾಲದತ್ತ ಗಮನವಿಟ್ಟು ಮುಂದೆ ನಡೆಸುವವನಾದ 4
14. ಆತಂಕವೇ ಬೇಕಿಲ್ಲ; ಇದು ಮುಕ್ತಾಯದ ಸಮಯ 4
16. ಕುಸ್ತಿಯಾಡಿ ತಂದಿದ್ದ ಪದಕವನ್ನು ಕಿತ್ತುಕೊಂಡದ್ದು ಹೇಗೆ? 3
17. ಹೊರಗಿನ ಆವರಣದಲ್ಲಿದ್ದ ಎಲ್ಲ ವಸ್ತುಗಳ ಕಳುವು 3
18. ಎಲ್ಲೆಲ್ಲೂ ಪಸರಿಸಿದೆ, ಸುವಾಸನೆಯ ಮಾವಿನ ತಳಿಯ ಹೆಸರು 4

**ಮೇಲಿಂದ ಕೆಳಕ್ಕೆ:**

1.ಹೊಲದ ಕೆಲಸವನ್ನು ಉತ್ತಮಪಡಿಸಲು ನೀಡಿದ್ದು ತಿಳಿವಳಿಕೆ 3
2. ನೂಲೆಳೆವ ಕೆಲಸಕ್ಕೆ ಇಂಥ ಕೊಳವೆ ಬೇಕೇ? 3
3. ಬಡ್ಡಿ ವ್ಯವಹಾರದ ಬಗೆಗೂ ಜಂಭದ ಮಾತು! 4
5. ಕಬ್ಬಿನ ವ್ಯಾಪಾರದಲ್ಲಾದ ಭಾರೀ ನಷ್ಟಕ್ಕೆ ದುಃಖದ ಕಣ್ಣೀರು 3
7. ಆಳವಾದ ಅಭ್ಯಾಸ ಮಾಡಿರುವವರ ಬಗೆಗೆ ತುಂಬ ಹೆಮ್ಮೆ, ಗೌರವ 4
9. ಅರಣ್ಯನೆಲವಾಗಿದ್ದದ್ದು ಹಾಳಾಗಿ ಈಗ ಯುದ್ಧರಂಗವಾಗಿದೆ 4
11. ವಿನಾಯಕನ ಪರಮ ಭಕ್ತ, ಆ ಹಡಗಿನ ಚಾಲಕ 3
13. ಅವರದ್ದೇ ದುಡ್ಡು ಬಳಸಿ ಮೇಲೇರುವುದು ಹೇಗೆ? 4
14. ಅಂಕಿತ ಹಾಕಲು ಹೋದವನಿಗೆ ಎದುರಾದ ನೋಡಿ ಯಮ 3
15. ಹರಿಯಲಿ ಬಿಡಿ, ಆಲೋಚನೆಯ ಅಲೆ 3

---

## 02-01-2020 ಉತ್ತರಗಳು

**ಎಡದಿಂದ ಬಲಕ್ಕೆ:**

1. ಸಾವಕಾಶ 3.ತವಂಧಾ (=ಧಾವಂತ ಹಿಂದುಮುಂದು) 4. ತಳಕು 6. ತಂಗುದಾಣ 7. ದಿಟ್ಟತನ 9. ರುಜುವಾತು 12. ಬಲವಂತ 14. ಮೆದುಗ 15. ವರ್ಣನೆ 16. ಮರೆಗುಳಿ

**ಮೇಲಿಂದ ಕೆಳಕ್ಕೆ:**

1. ಸಾಧಾರಣ 2. ಶತಪದಿ 3. ತರಗು 5. ಕುಶಿತ 6. ತಂಬೆಲರು 8. ನವನೀತ 10. ಜುಲುಮೆ 11. ತುರಂಗಮ 12. ಬಳುವಳಿ 13. ವಂಚನೆ

ಪ್ರಶ್ನಾ ಂಕಣ

# ಲಾಗರ್ ಹೆಡ್: ಏನು ವಿಶೇಷ?

ಲಾಗರ್ ಹೆಡ್ ಅದೊಂದು ಕಡಲಾಮೆ ಪ್ರಭೇದ (ಚಿತ್ರ 1). ಲಾಗರ್ ಹೆಡ್‌ನ ವೈಜ್ಞಾನಿಕ ನಾಮ 'ಕ್ಯಾರಟ್ ಕ್ಯಾರಟ್'. ಕಡಲಾಮೆಗಳ ಪ್ರಸ್ತುತದ ಸಪ್ತ ಪ್ರಭೇದಗಳಲ್ಲೂ ಲಾಗರ್ ಹೆಡ್‌ನದು ದ್ವಿವಿಧ ವೈಶಿಷ್ಟ್ಯ. ಶರೀರ ಗಾತ್ರದಲ್ಲಿ ಅದರದು (ಲೆದರ್ ಬ್ಯಾಕ್ ಕಡಲಾಮೆಯ ನಂತರದ) ದ್ವಿತೀಯ ಸ್ಥಾನ; ಆದರೆ ಗಟ್ಟಿ ಚಿಪ್ಪಿನ ಆಮೆಗಳಲ್ಲೆಲ್ಲ ಗಾತ್ರದಲ್ಲಿ ಅದರದ್ದೇ ಪ್ರಥಮ ಸ್ಥಾನ.

ಪ್ರೌಢ ಲಾಗರ್ ಹೆಡ್ ಕಡಲಾಮೆಗಳು ಮೂರು ಅಡಿ ಉದ್ದ ಇದ್ದು ಸರಾಸರಿ 160 ಕಿಲೋಗ್ರಾಂ ತೂಗುತ್ತವೆ. ಕಡಲಲ್ಲಿ ತಾಸಿಗೆ 25 ಕಿಲೋ ಮೀಟರ್ ವೇಗದಲ್ಲಿ ಈಜುವ ಈ ಪ್ರಭೇದದ ಹೆಣ್ಣುಗಳು ಸಂತಾನ ಕಾಲದಲ್ಲಿ 5,000 ದಿಂದ 12,000 ಕಿಲೋಮೀಟರ್ ದೂರದ ವಲಸೆ ಪಯಣ ಕೈಗೊಳ್ಳುತ್ತವೆ; ತಾವು ಜನ್ಮ ತಳೆದ ಕಡಲಂಚಿನ ಮರಳ ತಾಣಕ್ಕೇ ಬರುತ್ತವೆ; ಅಲ್ಲೇ ಗುಳಿ ತೋಡಿ ಮೊಟ್ಟೆ ಇಡುತ್ತವೆ!

ಲಾಗರ್ ಹೆಡ್‌ಗಳು ಪ್ರಧಾನವಾಗಿ ಬೇಟೆಗಾರ ಮಾಂಸಾಹಾರಿಗಳು. ಅವಕ್ಕೆ ತುಂಬ ಬಲಿಷ್ಠ ದವಡೆಗಳಿವೆ. ಜೆಲ್ಲಿ ಮೀನು ಮತ್ತು ಗಟ್ಟಿ ಚಿಪ್ಪಿನ ಮೃದ್ವಂಗಿಗಳೇ ಅವುಗಳ ಮುಖ್ಯ ಆಹಾರ. ಲಾಗರ್ ಹೆಡ್‌ಗಳು 35 ವರ್ಷ ವಯಸ್ಸಿನ ಸುಮಾರಿಗೆ ಪ್ರೌಢವಾಗುತ್ತವೆ; ಸಂತಾನ ಯೋಗ್ಯವಾಗುತ್ತವೆ. ಅಲ್ಲಿಂದ ಮುಂದೆ ಹೆಣ್ಣುಗಳು ಪ್ರತಿ ಎರಡು ಅಥವಾ ಮೂರು ವರ್ಷಗಳಿಗೊಮ್ಮೆ ಗರ್ಭ ಧರಿಸುತ್ತವೆ. ಸಾಗರಾವಾರದಲ್ಲಿ




ಎಲ್ಲೇ ಇದ್ದರೂ ಆ ವೇಳೆಗೆ ತಮ್ಮ ಜನ್ಮ ನೆಲೆಗೇ ಹಿಂದಿರುಗುತ್ತವೆ. ಪ್ರತಿ ಹದಿನಾಲ್ಕು ದಿನಗಳಿಗೊಮ್ಮೆ, ಹಾಗೆ ನಾಲ್ಕು ಬಾರಿ ಕಡಲಂಚಿನ ಮರಳ ಹಾಸಿಗೆ ನಡೆದು ಬಂದು, ಮರಳಲ್ಲಿ ಗುಳಿ ತೋಡಿ ಪ್ರತಿ ಬಾರಿಯೂ 100 ರಿಂದ 120 ಮೊಟ್ಟೆಗಳನ್ನಿಟ್ಟು ಕಡಲಿಗೆ ಹಿಂದಿರುಗುತ್ತವೆ. ಮೊಟ್ಟೆಗಳಿಂದ ಹೊರ ಬರುವ ಮರಿಗಳು ಹುಣ್ಣಿಮೆಯ ರಾತ್ರಿಗೇ ಕಾದು ಕಡಲಿನ ಭರತದ ವೇಳೆಯಲ್ಲಿ ಬೇಗ ಬೇಗ ನಡೆದು ಸಾಗರಕ್ಕೆ ಇಳಿಯುತ್ತವೆ. ಪ್ರತಿ ನೂರು ಮೊಟ್ಟೆಗಳಲ್ಲಿ ಹತ್ತು ಮಾತ್ರ ಉಳಿದು ಮರಿಯಾಗುತ್ತವೆ; ಹಾಗೆ ಹೊರ ಬರುವ ಪ್ರತಿ ನೂರು ಮರಿಗಳಲ್ಲಿ ಒಂದು ಮರಿ ಮಾತ್ರ ಪ್ರೌಢ ಹಂತ ತಲುಪುತ್ತದೆ! ಲಾಗರ್ ಹೆಡ್‌ಗಳ ಜೀವಿತಾವಧಿ 60 ರಿಂದ 70 ವರ್ಷ .

ಲಾಗರ್ ಹೆಡ್ ಕಡಲಾಮೆಗಳು ಪ್ರಸ್ತುತ ಸುರಕ್ಷಿತ ಸ್ಥಿತಿಯಲ್ಲೇನಿಲ್ಲ. ವಾಸ್ತವವಾಗಿ ಅವುಗಳ ಸಂಖ್ಯೆ ದಿನೇ ದಿನೇ ಕ್ಷೀಣಿಸುತ್ತಿದೆ. ಅದಕ್ಕೆ ಹಲವಾರು ಕಾರಣಗಳಿವೆ. ಕಡಲಾಮೆಗಳು ಮೊಟ್ಟೆ ಇಡಲು ಬರುವ ಬೀಚುಗಳೆಲ್ಲ ಪ್ರವಾಸೀ ಕೇಂದ್ರಗಳಾಗುತ್ತಿವೆ; ಜನಭರಿತವಾಗುತ್ತಿವೆ. ಈ ಆಮೆ ಮೊಟ್ಟೆಗಳು ಭಾರೀ ಸಂಖ್ಯೆಯಲ್ಲಿ ಕಳ್ಳ ಬೇಟೆಗಾರರ ಕೈ ಸೇರುತ್ತಿವೆ. ಪ್ರೌಢ ಆಮೆಗಳಂತೂ ಕಡಲಿಗೆ ಬೆರೆಯುತ್ತಿರುವ ಪ್ಲಾಸ್ಟಿಕ್ ಕಸವನ್ನು ತಿಳಿಯದೆ ತಿಂದು, ಮೀನುಗಾರರ ಗಾಳಕ್ಕೆ ಸಿಲುಕಿ, ಬಲೆಗಳಲ್ಲಿ ಬಂಧಿಯಾಗಿ (ಚಿತ್ರ 2, 3) ಮಾಂಸ ಮತ್ತು ಚರ್ಮಕ್ಕಾಗಿ ಮನುಷ್ಯರಿಗೆ ಬಲಿಯಾಗಿ, ಹಾಗೆಲ್ಲ ಅಂತ್ಯ ಕಾಣುತ್ತಿವೆ. ಎಂಥ ದುರಂತ!

■ ಎನ್. ವಾಸುದೇವ್